# ನ್ಯಾಷನಲ್ ಪಬ್ಲಿಕ್ ಸ್ಕೂಲ್

ಕೆಂಗೇರಿ, ಬೆಂಗಳೂರು

# ಕರ್ನಾಟಕ ರಾಜ್ಯೋತ್ಸವ ಆಚರಣೆಯ ವರದಿ



**ಕಲಿತವರಿಗೆ ಅಮೃತ , ನೆನೆದವರಿಗೆ ನೆರಳು ,**
**ಅಂಧರಿಗೆ ದಾರಿದೀಪ, ಅಪ್ಪಿಕೋ ಕನ್ನಡವ.**
**ಸಿರಿಗನ್ನಡಂ ಗೆಲ್ಗೆ , ಸಿರಿಗನ್ನಡಂ ಬಾಳ್ಗೆ.**



ನ್ಯಾಷನಲ್ ಪಬ್ಲಿಕ್ ಶಾಲೆ ಕೆಂಗೇರಿಯಲ್ಲಿ ೨೦೨೪ – ೨೫ ನೇ ಸಾಲಿನ ಪ್ರಾಥಮಿಕ ವಿಭಾಗದ ಕರ್ನಾಟಕ ರಾಜ್ಯೋತ್ಸವವನ್ನು 'ಭಕ್ತಿ' ಎಂಬ ಶೀರ್ಷಿಕೆಯಡಿಯಲ್ಲಿ ಆಚರಿಸಲಾಯಿತು. ನವೆಂಬರ್ ತಿಂಗಳಿನಲ್ಲಿ ಮೂರು ದಿನಗಳ ಕಾಲ ಪ್ರಾರ್ಥನಾ ಸಭೆಯನ್ನು ಕನ್ನಡದಲ್ಲಿ ಮಾಡುವುದರೊಂದಿಗೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಕ್ಕಳು ನಡೆಸಿಕೊಟ್ಟರು.

ದಿನಾಂಕ ೫-೧-೨೦೨೪ ರಂದು ಕರ್ನಾಟಕ ರಾಜ್ಯೋತ್ಸವದ ದಿನ ವಿಶೇಷತೆಯನ್ನು ತಿಳಿಸಲಾಯಿತು. ಅಲ್ಲದೆ ದೈವ ಭಕ್ತಿಯನ್ನು ಬಿಂಬಿಸುವ ಭಕ್ತಿ ಗೀತೆಯನ್ನು ಹಾಡಲಾಯಿತು. ದಿನಾಂಕ ೭-೧-೨೦೨೪ ರಂದು ಒಂದು ಮತ್ತು ಎರಡನೇ ತರಗತಿಯ ಮಕ್ಕಳು ಮಾತೃ ಮತ್ತು ಪಿತೃ ಭಕ್ತಿಯನ್ನು ತೋರಿಸುವ ಛದ್ಮ ವೇಷವನ್ನು ಮಾಡಿದರು.

ದಿನಾಂಕ ೮-೧-೨೦೨೪ ರಂದು ಮೂರರಿಂದ ಐದನೇ ತರಗತಿಯ ಮಕ್ಕಳು ನಾಡ ಭಕ್ತಿಯನ್ನು ಸಾರುವ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿದರು.ಅಲ್ಲದೆ ದೈವ ಭಕ್ತಿಯನ್ನು ಮೂಡಿಸುವ 'ಧ್ರುವ ನಕ್ಷತ್ರ'ದ ಕಥೆಯನ್ನು ನಾಟಕದ ಮೂಲಕ ಅಭಿನಯಿಸಿದರು.

ಮೂರರಿಂದ ಐದನೇ ತರಗತಿಯ ಮಕ್ಕಳಿಗೆ ಕನ್ನಡ ವ್ಯಾಕರಣ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ವಿವಿಧ ಭಾಷಾ ಚಟುವಟಿಕೆಗಳನ್ನು ಏರ್ಪಡಿಸಲಾಯಿತು. ತರಗತಿಯಲ್ಲಿ ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ಮಾಡಿದ ಈ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷಾ ಕಲಿಕೆಯಲ್ಲಿ ಹೆಚ್ಚು ಆಸಕ್ತಿ ಮೂಡಿಸಲು ನೆರವಾದವು. ಹಾಗೂ ಹಲವಾರು ವ್ಯಾಕರಣ ಅಂಶಗಳನ್ನು ತಿಳಿಯಲು ನೆರವಾದವು. ಐದನೇ ತರಗತಿ ವಿದ್ಯಾರ್ಥಿಗಳು ಕರ್ನಾಟಕದ ವಿವಿಧ ಭಾಗಗಳ ಸಂಸ್ಕೃತಿ, ಕಲೆ, ಆಚಾರ- ವಿಚಾರಗಳು, ಆಹಾರ ಪದ್ಧತಿಯನ್ನು ಒಳಗೊಂಡಂತೆ ಚಿತ್ರಪಟಗಳನ್ನು ತಯಾರಿಸಿದ್ದರು. ಇದರಿಂದ ಮಕ್ಕಳು ಕರ್ನಾಟಕದ ವಿವಿಧ ಭಾಗಗಳ ಸಂಸ್ಕೃತಿಯ ಬಗ್ಗೆ ಮಾಹಿತಿಯನ್ನು ತಿಳಿದರು.

